**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 29-03-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಸ್ ವಕೀಲರವರಿಂದಃ

ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಯೊಂದಿಗೆ ಒಡಹುಟ್ಟಿದವರು 3 ಜನ. ಸದರಿ 3 ಜನರು ವಿಭಾಗವಾಗಿರುತ್ತಾರೆ. ಸದರಿ ವಿಭಾಗವು 2020 ರಲ್ಲಿ ಆಗಿರುತ್ತೇವೆ ಆದರೆ ವಿಭಾಗ ಪತ್ರ ಇಲ್ಲ. 2020 ರ ಪೂರ್ವದಲ್ಲಿ ನನ್ನ ಅಜ್ಜಿಯೇ ಕುಟುಂಬದ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಹೋಟೆಲ್ ನನ್ನ ಅಜ್ಜಿಯೇ ನಡೆಸುತ್ತಿದ್ದು, ಆಟೋವನ್ನು ನನ್ನ ಚಿಕ್ಕಪ್ಪ ರಾಜು ಆರ್ ಎಂಬುವವರು ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ನನ್ನ ಅಜ್ಜಿಯ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದು ಸಂಬಳ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಪಡೆದುಕೊಳ್ಳುತ್ತಿದ್ದರು ಈಗ ಇಲ್ಲ ಎನ್ನುತ್ತಾರೆ. ವಿಭಾಗವಾದ ನಂತರ ನನ್ನ ಚಿಕ್ಕಪ್ಪ ಸೋಮು ಬೇರೆ ಹೋಟೆಲ್ ನಡೆಸುತ್ತಿದ್ದು ನಾವು ನನ್ನ ಅಜ್ಜಿ ನಡೆಸುತ್ತಿದ್ದ ಹೋಟೆಲ್ ನಡೆಸುತ್ತಿದ್ದೇವೆ ಎಂದರೆ ಸರಿ. ಸದರಿ ಹೋಟೆಲ್ ನ್ನು ನನ್ನ ತಾಯಿ, ನನ್ನ ಚಿಕ್ಕಮ್ಮ, ನನ್ನ ಚಿಕ್ಕಪ್ಪ ರಾಜು ರವರ ಕುಟುಂಬ ನೋಡಿಕೊಳ್ಳುತ್ತಿದ್ದೇವೆ. ತಿಂಗಳಿಗೆ 1 ಲಕ್ಷದ 10 ಸಾವಿರ ಆದಾಯವಿದ್ದು ಖರ್ಚು ವೆಚ್ಚವನ್ನು ಕಳೆದು 45-50 ಸಾವಿರ ಆದಾಯವಿದೆ. ಸಾಕ್ಷಿ ಮುಂದುವರೆದು ಸದರಿ ಆದಾಯವು ಒಂದೊಂದು ಕುಟುಬಂದ ಉಳಿತಾಯವಾಗಿದೆ ಎನ್ನುತ್ತಾರೆ. ಸದರಿ ಆದಾಯವನ್ನು ನಗದು ರೂಪದಲ್ಲಿ ಮನೆಯಲ್ಲೆ ಇಡುತ್ತೇವೆ. ಸಾಕ್ಷಿ ಮುಂದುವರೆದು ಬ್ಯಾಂಕಿನಲ್ಲಿ ಹೆಚ್ಚು ವ್ಯವಹಾರ ಮಾಡುವುದಿಲ್ಲ ಎನ್ನುತ್ತಾರೆ. ನನ್ನೊಂದಿಗೆ ನನ್ನ ತಂಗಿ ಒಡಹುಟ್ಟಿದವರಾಗಿರುತ್ತಾರೆ. ಸದರಿಯವರ ಹೆಸರು ನಂದಿನಿ. ಸದರಿಯವರಿಗೆ ಗುರುದೇವನಹಳ್ಳಿ ಗ್ರಾಮಕ್ಕೆ ಮದುವೆಮಾಡಲಾಗಿದೆ. ನನ್ನ ಭಾವ 2021 ರ ಪೂರ್ವದಲ್ಲಿ ಟೊಯೋಟಾ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಹೊನ್ನಲಗೆರೆಯಲ್ಲಿ ಬಟ್ಟೆ ಅಂಗಡಿ ಕೂಡಾ ಇಟ್ಟಿದ್ದರು ಎಂದರೆ ಸರಿ. ಸದರಿ ಅಂಗಡಿಯನ್ನು ಆರೋಪಿಗೆ ವಹಿಸಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಭಾವ ಸದರಿ ಬಟ್ಟೆ

ಅಂಗಡಿಯನ್ನು 5 ಲಕ್ಷ ಬೆಲೆ ಬಾಳುವ ಸಾಮ್ರಾಗ್ರಿಗಳೊಂದಿಗೆ ನಷ್ಟ ಹೊಂದಿದ್ದರಿಂದ ಆರೋಪಿಯವರಿಗೆ ವಹಿಸಿದ್ದರು ಎಂದರೆ ಸಾಕ್ಷಿಯು ಮಾರಾಟ ಮಾಡುವುದಾಗಿ ಹೇಳಿದ್ದರು ಆದರೆ ನಷ್ಟ ಹೊಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಮತ್ತು ಆರೋಪಿಗೆ ನೀಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ನನ್ನ ಭಾವ ತನ್ನ ವ್ಯಾಪಾರವನ್ನು ಆರೋಪಿಗೆ ವಹಿಸಿದಾಗ ಭದ್ರತೆಗಾಗಿ ನಿಪಿ-1ರ ಚೆಕ್ ನ್ನು ಒಳಗೊಂಡಂತೆ ಇನ್ನು ಎರಡು ಚೆಕ್ ಗಳಿಗೆ ಸಹಿ ಮಾಡಿ ಅದರಲ್ಲಿ ಒಂದಕ್ಕೆ 2 ಲಕ್ಷ ಮತ್ತು ಮತ್ತೊಂದಕ್ಕೆ 2 ಲಕ್ಷ 60 ಸಾವಿರ ನಮೂದಿಸಿ ನೀಡಿದ್ದು, ನಿಪಿ-1ರ ಚೆಕ್ ಸಹಿ ಮಾಡಿ ಖಾಲಿ ನೀಡಿದ್ದರು ಎಂದರೆ ಸಾಕ್ಷಿಯು ನಿಪಿ-1 ಚೆಕ್ ನ್ನು ನನಗೆ ಸಾಲ ನೀಡಿದಾಗ ನೀಡಿದ್ದು, ಉಳಿದ ಎರಡು ಚೆಕ್ ಗಳ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಬಳಿ ಟೊಯೋಟಾ ಲ್ನಾಜಾ ಕಾರು ಇದೆ ಎಂದರೆ ಸರಿ. ಸದರಿ ಕಾರು 2021 ರಲ್ಲಿ ನನಗೆ ವರ್ಗಾವಣೆಯಾಗಿದ್ದು, ಅದಕ್ಕೆ ಪೂರ್ವದಲ್ಲಿ ಆರೋಪಿಯ ಹೆಸರಿನಲ್ಲಿತ್ತು ಎಂದರೆ ಸರಿ. 2021 ರಲ್ಲಿ ಆರೋಪಿಯು ಹೊಸಕಾರನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾರಿಗೆ 3 ಲಕ್ಷ ಮುಂಗಡವಾಗಿ ಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ಲಕ್ಷ ಪಾವತಿ ಮಾಡಿದ್ದನ್ನು ಕೂಡಾ ವಾಪಸ್ ಪಡೆಯದೇ ಕಾರನ್ನು ನನ್ನ ಭಾವನಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ಲಕ್ಷದ 20 ಸಾವಿರ ಪಡೆದು ನನಗೆ ನೀಡಿದ್ದಾರೆ. ಕಾರಿನ 3 ಲಕ್ಷದ ಮುಂಗಡ ಹಣದೊಂದಿಗೆ 1 ಲಕ್ಷ ಇ ಎಂ ಐ ನ್ನು ಸಹ ನನ್ನ ಭಾವನಿಗೆ ನೀಡುವ ಪೂರ್ವದಲ್ಲಿ ಪಾವತಿ ಮಾಡಿದ್ದರು ಎಂದರೆ ಸಾಕ್ಷಿಯು ನಾನು 2 ಲಕ್ಷ 20 ಸಾವಿರ ನೀಡಿ ಖರೀದಿಸಿ ಉಳಿಕೆ ಇ ಎಂ ಐ ನ್ನು ನಾನು ಪಾವತಿಸಿದ್ದೇನೆ ಎನ್ನುತ್ತಾರೆ. ಈಗಾಗಲೇ ಆರೋಪಿಯು 4 ಲಕ್ಷವನ್ನು ಕಾರಿನ ಸಂಬಂಧ ಪಾವತಿ ಮಾಡಿದ್ದರಿಂದ ಯಾವಾ ವ್ಯಕ್ತಿಯು ಕೂಡಾ ಅದಕ್ಕಿಂತ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾರನ್ನು ಎರಡನೇ ಭಾರಿಗೆ ಮಾರಾಟ ಮಾಡಿದಾಗ ಅದು ಖರೀದಿಸಿದ

ಮರುದಿನವಾಗಿದ್ದರೂ ಸಹ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುತ್ತಾರೆ ಎನ್ನುತ್ತಾರೆ. ಕಾರಿನ ಮಾರಾಟದ ಮಾತುಕತೆಗೆ ನಾನು ಮತ್ತು ಆರೋಪಿ ಇಬ್ಬರೇ ಸೇರಿದ್ದೆವು. ನಾನು ಸುಳ್ಳು ನುಡಿಯುತ್ತಿದ್ದು ಆರೋಪಿಯೊಂದಿಗೆ ಕಾರಿನ ವ್ಯಾಪಾರವನ್ನೇ ಮಾಡಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನಮ್ಮ ಹೋಟೆಲ್ ಗೆ ಬರುತ್ತಿದ್ದರಿಂದ ಹಾಗೂ ಬಟ್ಟೆ ಖರೀದಿಸಲು 2021 ರಲ್ಲಿ ಬರುತ್ತಿದ್ದರಿಂದ ಪರಿಚಯವಾಗಿದ್ದರು. ಬಟ್ಟೆಯನ್ನು ಖರೀದಿಸಲು ಬೆಸಗರಹಳ್ಳಿಗೆ ಹೋಗುತ್ತಿದ್ದೆವು. 2021 ರ ಅವಧಿಯಲ್ಲಿ ಆರೋಪಿಯು ತನ್ನ ಬಟ್ಟೆ ಅಂಗಡಿಯನ್ನು ನಷ್ಟ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಮನೆಯು ಕೋಣಸಾಲೆಯಲ್ಲಿದೆ. ಸದರಿಯವರ ಮನೆ ನೋಡಿಲ್ಲ. ಆರೋಪಿಯು ಚೆಕ್ ನ್ನು ನಮ್ಮ ಮನೆಯಲ್ಲಿ ಕೊಟ್ಟಿರುತ್ತಾರೆ. ಆರೋಪಿಯು ನನ್ನೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಮತ್ತು ಯಾವುದೇ ಚೆಕ್ ನ್ನು ನೀಡಿರದೇ ನನ್ನ ಭಾವನಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ಕೋಣಸಾಲೆಯಲ್ಲಿ ನೆಲೆಸಿರದೇ ಬೆಂಗಳೂರಿನಲ್ಲಿ ನೆಲೆಸಿದ್ದು ವಾರಕ್ಕೊಮ್ಮೆ ಅವರ ಅತ್ತೆ ಮನೆಯಾದ ಮುದಗೆರೆ ಗೆ ಬರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ನೋಟಿಸ್ ನ್ನು ಆನೆಕೆರೆ ಗ್ರಾಮ ಮತ್ತು ಕೋಣಸಾಲೆ ಗೆ ನೀಡಿದ್ದೆನೆ. ಚೆಕ್ ಅಮಾನ್ಯವಾದ ನಂತರ ಆರೋಪಿಯನ್ನು ಭೇಟಿ ಮಾಡಿಲ್ಲ. ಸದರಿ ಚೆಕ್ ಅಮಾನ್ಯವಾದ ಬಗ್ಗೆ ಫೋನ್ ಮಾಡಿ ಹೇಳಿದ್ದೇನೆ. ಸದರಿ ಆರೋಪಿಯ ಮೊಬೈಲ್ ಸಂಖ್ಯೆ ನನ್ನ ಮೊಬೈಲ್ ನಲ್ಲಿದೆ. ಸಾಕ್ಷಿ ಮುಂದುವರೆದು ನನ್ನ ಫೋನ್ ಸಂಖ್ಯೆಯನ್ನು ಆರೋಪಿಯು ಸ್ವೀಕರಿಸುತ್ತಿಲ್ಲದ ಕಾರಣ ಬೇರೆ ಸಂಖ್ಯೆಯಿಂದ ಕರೆ ಮಾಡಿದ್ದೆ ಎನ್ನುತ್ತಾರೆ. ಸದರಿಯವರ ಫೋನ್ ಸಂಖ್ಯೆ ಮತ್ತು ಹೆಸರು ನನಗೆ ಗೊತ್ತಿಲ್ಲ. ನಾನು ಸುಮಾರು 4-5 ಭಾರಿ ಕರೆ ಮಾಡಿರುತ್ತೇನೆ. ನನ್ನ ಭಾವ ನನ್ನೊಂದಿಗೆ ಚೆನ್ನಾಗಿದ್ದಾರೆ.

ನಾನು ಆರೋಪಿಗೆ 5 ಲಕ್ಷ ಸಾಲ ನೀಡಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ. ಸಾಕ್ಷಿ ಮುಂದುವರೆದು ಸಾಮಾನ್ಯವಾಗಿ 5 ಲಕ್ಷ ನಗದು ಇಟ್ಟಿರುತ್ತೇವೆ ಎನ್ನುತ್ತಾರೆ. ಹೆಚ್ಚಿನ ಮೊತ್ತ

ಅವಶ್ಯಕತೆ ಇದ್ದಲ್ಲಿ ನನ್ನ ತಾಯಿಯ ಒಡವೆಯನ್ನು ವಿಜಯ್ ಬ್ಯಾಂಕಿನಲ್ಲಿ ಗಿರವಿ ಇಡುತ್ತೇವೆ. ಸಾಕ್ಷಿ ಮುಂದುವರೆದು ಇತ್ತೀಚೆಗೆ ಬಿಡಿಸಿದ್ದೆವೆ ಎನ್ನುತ್ತಾರೆ. ನನ್ನ ಅಜ್ಜಿಯು ನಮ್ಮ ಹೆಸರಿಗೆ ಮನೆಯನ್ನು ನೀಡಿದ್ದು, ಆದರೆ ನಮ್ಮ ಹೆಸರಿಗೆ ಆಗಿಲ್ಲ. ಮನೆಯನ್ನು ಹೊರತುಪಡಿಸಿ ನನಗೆ ಬೇರೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನನಗೆ ಚನ್ನೇಗೌಡನದೊಡ್ಡಿ ಯಲ್ಲಿ 5 ಗುಂಟೆ ಜಮೀನು ನನ್ನ ಹೆಸರಿನಲ್ಲಿದೆ. ಸದರಿ ಜಮೀನನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದೇನೆಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಆಗಲೇ ಖರೀದಿ ಮಾಡಿದ್ದು ಅಂದರೆ ಕೋರೋನಾ ಆದ ನಂತರ ಖರೀದಿ ಮಾಡಿದ್ದು ಈಗ ನೆನಪಿಲ್ಲ ಎನ್ನುತ್ತಾರೆ. ಸದರಿ ಜಮೀನನ್ನು ಒಂದೇ ಭಾರಿ ಪಾವತಿ ಮಾಡಿ ಖರೀದಿಸಿರದೇ ತಿಂಗಳಿಗೆ ಕಂತು ರೂಪದಲ್ಲಿ ಎಷ್ಟು ಹಣವಾಗುತ್ತದೆ ಅಷ್ಟು ಹಣ ಪಾವತಿಸಿ ಖರೀದಿ ಮಾಡಿರುತ್ತೇವೆ. ಕಾರಿನ ಇ ಎಂ ಐ 21,355/- ರೂ ಮಾಹೆಯಾನ ಪಾವತಿ ಮಾಡುತ್ತಿದ್ದು ಈ ಮಾರ್ಚ್ ನಲ್ಲಿ ಮುಕ್ತಾಯವಾಗಿದೆ ಎನ್ನುತ್ತಾರೆ. ನನ್ನ ಪಡಿತರ ಚೀಟಿಯಲ್ಲಿ ನನ್ನ ತಾಯಿ, ನನ್ನ ಹೆಂಡತಿ ಮತ್ತು ನನ್ನ ಹೆಸರು ನಮೂದಾಗಿದೆ. ಸದರಿಯು ಬಿ ಪಿ ಎಲ್ ಕಾರ್ಡ್ ಆಗಿದೆ. ಕಾರಿನ ಇ ಎಂ ಐ ಪಾವತಿಸಿ, ನನ್ನ ತಂಗಿಯ ಮದುವೆ ಮಾಡುವುದರಲ್ಲಿ ಸಾಕಷ್ಟು ಹಣ ಖರ್ಚಾಗಿರುವುದರಿಂದ ನನಗೆ ಆರೋಪಿಗೆ ಸಾಲ ನೀಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಿನ್ನ ಅಜ್ಜಿಯನ್ನು ಹೋಟೆಲ್ ಈಗ ನೀಡಿರುವುದರಿಂದ ಹಿಂದೆ ನಿನಗೆ ಸಾಕಷ್ಟು ಆದಾಯವಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂಗಿಯ ಮದುವೆಯು ಆಗಲೇ ಆಗಿತ್ತು ಎನ್ನುತ್ತಾರೆ. ನನ್ನ ಚಿಕ್ಕಪ್ಪ ಸೋಮು ರವರು 1 ವರ್ಷದ ಹಿಂದೆ ಹೋಟೆಲ್ ಮಾಡಿದ್ದಾರೆಂದರೆ ಸಾಕ್ಷಿಯು 1 ವರ್ಷದಿಂದ ಈಚೆಗೆ ಮಾಡಿರುತ್ತಾರೆ ಎನ್ನುತ್ತಾರೆ. 2024 ರವರೆಗೂ ನನ್ನ ಅಜ್ಜಿಯೇ ಯಜಮಾನಿಕೆ ಮಾಡುತ್ತಿದ್ದರು ಎಂದು ಪ್ರಶ್ನಿಸಿದ್ದು ಈಗಾಗಲೇ ಸದರಿ ಪ್ರಶ್ನೆಯನ್ನು 2020 ರ ಪೂರ್ವದಲ್ಲಿ ಯಜಮಾನಿಕೆ ಮಾಡುತ್ತಿದ್ದರು ಎಂದು ಪ್ರಶಿಸಿರುವುದರಿಂದ ಮರುಪ್ರಶ್ನೆ ಮಾಡಲು ಅವಕಾಶ ಇಲ್ಲ ಎಂದು ತಿರಸ್ಕರಿಸಲಾಯಿತು.

ನನ್ನ ಅಜ್ಜಿಯು ಪ್ರತ್ಯೇಕವಾದ ಮನೆಯಲ್ಲಿದ್ದು ಎಲ್ಲರೂ ಸೇರಿ ನೋಡಿಕೊಳ್ಳುತ್ತಿದ್ದೆವೆ. ನಾವು ಇತ್ತೀಚೆಗೆ ವಿಭಾಗವಾಗಿದ್ದು, ಹೋಟೆಲ್ ವ್ಯವಹರಣೆಯಿಂದ ಕೇವಲ 5 ರಿಂದ 10 ಸಾವಿರ ಉಳಿತಾಯವಾಗುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು